

# ದೈತ್ಯ ಛತ್ರಿ



ಮಳೆ ಬರುವಾಗ, ಉರಿಯುವ ಬಿಸಿಲು ನೆತ್ತಿಯನ್ನು ಸುಡುವಾಗ ನಿನ್ನ ಬಿಡೆ ಎಂದು ಜೊತೆಗೆ ಬರುವುದು ಕೊಡೆ ಅಥವಾ ಛತ್ರಿ. ಒಬ್ಬರಿಗೋ ಇಬ್ಬರಿಗೋ ನೆರಳು ಕೊಡುವ ಪುಟ್ಟ ಛತ್ರಿಗಳನ್ನು ಕಂಡಿದ್ದೇವೆ. ಆದರೆ ನೂರಾರು ಮಂದಿಗೆ ಬಿಸಿಲು ಮರೆ ಮಾಡಿ ನೆರಳು ಕೊಡುವ ಜಗತ್ತಿನ ಅತಿ ದೊಡ್ಡ ಗಾತ್ರದ ಎಂಟು ಛತ್ರಿಗಳನ್ನು ನೋಡಬೇಕಿದ್ದರೆ ಮುಸಲ್ಮಾನರ ಯಾತ್ರಾಸ್ಥಳ ಮಕ್ಕಾಗೆ ಹೋಗಬೇಕು. ಅಲ್ಲಿರುವ ಗ್ರ್ಯಾಂಡ್ ಮಸೀದಿಯ ಅಂಗಣದಲ್ಲಿ ಇವುಗಳನ್ನು ಸಾಲಾಗಿ ಸ್ಥಾಪಿಸಲಾಗಿದೆ.

ಮಕ್ಕಾಗೆ ಬರುವ ಯಾತ್ರಾರ್ಥಿಗಳಿಗೆ ಕಡು ಬಿಸಿಲಿನಿಂದ ರಕ್ಷಣೆ ನೀಡುವ ಪ್ರತಿಯೊಂದು ಛತ್ರಿಯೂ 45 ಮೀಟರ್ ಎತ್ತರವಾಗಿದ್ದು 2400 ಚದರ ಮೀಟರ್ ಪ್ರದೇಶದಲ್ಲಿ ನೆರಳನ್ನು ಹರಡುತ್ತದೆ. ಒಂದೊಂದು ಛತ್ರಿಯ ಕೆಳಗೂ 122 ಬೆಂಚುಗಳನ್ನು ಅಳವಡಿಸಲಾಗಿದೆ. ಜರ್ಮನಿಯ 25 ಮಂದಿ ತಂತ್ರಜ್ಞರು ಸೇರಿಕೊಂಡು ನಿರ್ಮಿಸಿರುವ ಈ ಹೈಟೆಕ್ ಛತ್ರಿಗಳನ್ನು ಬೆಳಿಗ್ಗೆ ಅರಳಿಸಲಾಗುತ್ತದೆ. ಸಂಜೆ ಮುದುಡಿಸಲಾಗುತ್ತದೆ. ಅರಳಲು ಮತ್ತು ಮುದುಡಲು ಮೂರು ನಿಮಿಷಗಳ ಅವಧಿ ಬೇಕಾಗುತ್ತದೆ. ತಾಪಮಾನ ಕಡಿಮೆಯಿರುವ ದಿನಗಳಲ್ಲಿ ಅದನ್ನು ಬಿಡಿಸುವ ಕ್ರಮವಿಲ್ಲ. ರಾತ್ರಿ ಅದರ ಬಟ್ಟೆಗಳು ಕಲ್ಲಿನ ಗೋಡೆಗಳಿಂದ ಉಷ್ಣಾಂಶವನ್ನು ಹೀರಿಕೊಂಡು ಚಳಿಗಾಲದ ದಿನಗಳಲ್ಲಿ ಹಗಲಿನಲ್ಲಿ ಬಿಡುಗಡೆ ಮಾಡುವ ಮೂಲಕ ಬೆಚ್ಚಗಿನ ಅನುಭವ ಕೊಡುತ್ತವೆ.

ಹೂವಿನಂತೆ ಅರಳಿಕೊಳ್ಳುವ ಈ ಬೃಹತ್ ಛತ್ರಿಗಳಿಗೆ ನೇರಳಾತೀತ ಕಿರಣಗಳನ್ನು ನಿರೋಧಿಸುವ ಟೆಫ್ಲಾನ್ ಬಟ್ಟೆಯನ್ನು ಮುಚ್ಚಲಾಗಿದೆ. ತುಕ್ಕುರಹಿತ ಕಬ್ಬಿಣದ ಕೊಳವೆಗಳು ಹಿಡಿಕೆಯಾಗಿವೆ. ಮೇಲ್ಭಾಗದಲ್ಲಿ ತೆಳ್ಳಗಿನ ಗ್ರಾನೈಟ್ ಶಿಲೆಯ ಮುಚ್ಚಿಗೆಯಿದೆ. ಛತ್ರಿಯ ಪ್ರತಿಯೊಂದು ಭಾಗದಲ್ಲಿ ಭದ್ರತಾ ವ್ಯವಸ್ಥೆಯ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಹಾಗೆಯೇ ವೇಳೆಯನ್ನು ತಿಳಿಯಲು ಗಡಿಯಾರಗಳಿವೆ. ಪ್ರತೀ ಛತ್ರಿಯು 16 ಟನ್ ಭಾರವಾಗಿದೆ. ಛತ್ರಿಗಳು ಒಂದಕ್ಕೊಂದು ತಗಲುವುದಿಲ್ಲ. ಇದು ಅರಳಲು, ಮುಚ್ಚಲು ಹೈಡ್ರೋಲಿಕ್ ಯಾಂತ್ರಿಕ ಪದ್ಧತಿಯನ್ನು ಅಳವಡಿಸಲಾಗಿದೆ.

ಸೌದಿಯ ದೊರೆ ಶೇಖ್ ಅಬ್ದುಲ್ ರಹಮಾನ್ ಅವರು ಒಂದು ವರ್ಷದ ಹಿಂದೆ ಸ್ಥಾಪಿಸಿದ ಛತ್ರಿಗಳು ಇವು.

■ ಪ. ರಾಮಕೃಷ್ಣ ಶಾಸ್ತ್ರಿ